ಯೋಗಾಸನ. ಕೊಳದ ಮೇಲೆ ಹಂಸವೊಂದು ಇಳಿಯುವ ಮತ್ತು ಕೊಳಬಿಟ್ಟು ನೀಲಗಗನಕ್ಕೆ ಏರುವ ವೈಮಾನಿಕ ಕ್ರಿಯೆ.

ನಸುಕಿನಲ್ಲಿ ಪೇಪರ್ ಹಾಕುವ ಹುಡುಗರಂತೂ ಸೈಕಲನ್ನು ದೇಹಕ್ಕಂಟಿದ ರೆಕ್ಕೆಯಂತಿರುವ ಪಳಗಿಸಿರುವ ಹಕ್ಕಿಗಳೇ! ಈ ಹಕ್ಕಿಗಳು ಸೈಕಲ್ ಕಲಿಯುವ ಅವಸ್ಥೆಯಲ್ಲಿ ಸಮಾಜವೇ ಪಾಲುಗೊಳ್ಳುತ್ತದೆ. ಒಳಪೆಡಲಿಗರು ರಸ್ತೆಗೆ ಬಂದರೆ ಎಲ್‌ಬೋರ್ಡ್ ವಾಹನ ಕಂಡವರಂತೆ ಹಿರೀಕರು ಬದಿಗೆ ಸರಿವರು; 'ಮರಿ, ಮೈದಾನಕ್ಕೆ ಹೋಗು, ಲಾರಿಬಸ್ಸು ಗುದ್ದಿಯಾವು' ಎಂದು ಹಿತವಚಿಸುವರು. ಈ ಮರಿಗಳು ಹಾಕಿಕೊಂಡು ಕೆಳಗೆಬಿದ್ದರೆ, ಎಳೆಯಾನೆ ಕೆಸರಲ್ಲಿ ಸಿಕ್ಕಿಕೊಂಡಾಗ ತಾಯಾನೆ ಬಂದು ಎಬ್ಬಿಸುವಂತೆ ಎತ್ತಿ ದೂಳು ಕೊಡಹುವರು. ಅವರಿಗೆ ಗೊತ್ತು ತಾವೂ ಕೋಶಾವಸ್ಥೆಯಿಂದಲೇ ಚಿಟ್ಟೆಯಾದವರೆಂದು. ಯೋಗಸಾಧನೆಯಲ್ಲಿ ಒಮ್ಮೆಲೇ ತುರಿಯಾವಸ್ಥೆ ಸಿಗುವುದಿಲ್ಲವಷ್ಟೆ. ಸೈಕಲ್ ಕಲಿಕೆಯು ಹಕ್ಕಿಯು ಆಗಸದಿಂದ ಇಳಿದು ಮರದ ಹಣ್ಣಿನ ಮೇಲೆ ಕೂರುವ ವಿಹಂಗಮ ಮಾರ್ಗವಲ್ಲ; ನೆಲದ ಮೇಲಣ ಇರುವೆಯೊಂದು ಹಂತಹಂತವಾಗಿ ಮರಹತ್ತಿ ಹಣ್ಣನ್ನು ಸಮೀಪಿಸುವ ಪಿಪೀಲಿಕಾ ಮಾರ್ಗ. ಸರಳತೆ ಮತ್ತು ಶ್ರಮಸಂಸ್ಕೃತಿಯ ಪ್ರತೀಕವಾದ ಸೈಕಲ್ ಚಾಲನೆ ಒಂದು ಅಧ್ಯಾತ್ಮ ಸಾಧನೆಯೇ ಸರಿ.

ಕಲಿಕೆಯ ದಿನಗಳಲ್ಲಿ ಎಲ್ಲ ಎಳೆಯರಿಗೂ ಕಂಡಕಂಡ ಸೈಕಲನ್ನು ಮೆಟ್ಟಬೇಕೆಂಬ ಕಾಲ್ತುಡಿತವಿರುತ್ತದೆ. ನಾನು ಮನೆಗೆ ಬಂದ ಅತಿಥಿಗಳು ಚಾಪಾನಿ ಮುಗಿಸುವುದರೊಳಗೆ, ಕಾಡಿಬೇಡಿ ಸೈಕಲನ್ನು ಪಡೆದು ಬೀದಿಯಲ್ಲಿ ಸಣ್ಣದೊಂದು ರೌಂಡು ಹಾಕುತ್ತಿದ್ದೆ. ಆದರೆ ಹಾಳಾದ ವಾಹನ ಮನೆಯತ್ತ ಹೊರಳದೆ, ನನ್ನ ನಿಯಂತ್ರಣ ಮೀರಿ ಬೀದಿಯಿಂದ ರಸ್ತೆಗೆ ದಾಟುತ್ತಿತ್ತು. ಒಮ್ಮೆ ನಮಗೆಲ್ಲ ಸಲುಗೆಯಿದ್ದ ಸಲೀಮ್‌ಮಾಮನು ಮನೆಗೆ ಬಂದಿದ್ದನು. ಸೀಮೆಯೆಣ್ಣೆ ವ್ಯಾಪಾರಿಯಾಗಿದ್ದ ಅವನಿಗೆ ತನ್ನ ಹೊಸ ಸೈಕಲನ್ನು ತೋರಿಸಿ ಅಕ್ಕನಿಂದ ಹಾರೈಕೆ ಪಡೆವ ಇರಾದೆ. ಅಮ್ಮ ತಮ್ಮನಾರ್ಥ ಚಿಕನ್ ಬಿರಿಯಾನಿ ಮಾಡಿ ಸಂತೋಷಕೂಟ ಏರ್ಪಡಿಸಿದಳು. ಅಕ್ಕತಮ್ಮ ಸೇರಿ ಮನೆತನದ ಹಳೇವಿಷಯ ಎತ್ತಿಕೊಂಡು ಮಾತಾಡುತ್ತ ಅಡುಗೆ ಕಾರ್ಯದಲ್ಲಿ ಮುಳುಗಿದರು. ಹೊರಬಂದು ನೋಡಿದೆ. ಸೈಕಲ್ ಜಗಮಗಿಸುತ್ತ ಹೊಂಗೆಯ ಮರದಡಿ ಜೀನುಹಾಕಿ ಸಜ್ಜುಗೊಳಿಸಿದ ಕುದುರೆಯಂತೆ ನಿಂತಿತ್ತು. ಕಪ್ಪು ಪೈಪುಗಳಿಂದ ಮಾಡಿದ ತ್ರಿಕೋನಾಕಾರದ ಬಾರು; ಸಿಂಹಾಸನದಂತೆ ದಪ್ಪಚರ್ಮದಲ್ಲಿ ಮಾಡಿದ ಕೆಂಚುಸೀಟು; ಹಿಂಚಕ್ರಕ್ಕೆ ಕೈಕೋಳದಂತಹ ಬೀಗ; ವಿದ್ಯುತ್ ಉತ್ಪಾದಿಸುವ ಕುಡಿಕೆಯಾಕಾರದ ಡೈನಮೊ; ಹ್ಯಾಂಡಲ್ ನಡುವೆ ಹರನ ಹಣೆಗಣ್ಣಂತಿರುವ ಲೈಟು; ಅದರಡಿ ಚೌಕಾಕಾರದ ಬೆತ್ತದಬುಟ್ಟಿ; ಹಿಂಬದಿ ಸ್ಟೀಲಿನ ಕ್ಯಾರಿಯರ್; ಶಾಕ್ ಅಬ್ಸರ್ವರ್ ಸುರುಳಿಗಳ ಮೇಲರಳಿದ ಪ್ಲಾಸ್ಟಿಕ್ ಹೂಗುಚ್ಛ; ಬಿಲ್ಲಂತೆ ಬಾಗಿದ ಮಡ್‌ಗಾರ್ಡಿನ ಮೇಲೆ ಭೂಮಿಹೊತ್ತು ನಿಂತ ಅಟ್ಲಾಸನ ಚಿತ್ರವುಳ್ಳ ಪದಕ; ಸ್ಟೀಲ್‌ಬಟ್ಟಲು ಬೋರಲು ಬಿದ್ದಂತಿರುವ ಬೆಲ್ಲು, ಅದರೊಳಗಿಂದ ಬೆರಳು ಚಾಚಿದಂತೆ ಬಾರಿಸುವ ಕೊಂಡಿ. ಆಹಾ! ನೋಡುವ ಕಣ್ಗಳ ಪುಣ್ಯದಂತೆ, ಸವಾರಿ ಮಾಡುವವನ ಸೌಭಾಗ್ಯದಂತೆ ಅದು ಸೆಳೆಯುತ್ತಿತ್ತು. ರೈತಾಪಿ ತರುಣರು ಎತ್ತುಗಳ ಕೋಡುಕೆತ್ತಿಸಿ, ಪಾಲಿಶ್ ಹಾಕಿಸಿ, ಕುಚ್ಚಿನಗೊಂಡೆ ಕಟ್ಟಿ, ಕೊರಳಿಗೆ ಗೆಜ್ಜೆಸರ ಹಾಕಿ ಸಿಂಗರಿಸಿದಂತಿತ್ತು. ವಾಹನ ಗುರಿಮುಟ್ಟಿಸುವ ಸಾಧನ ಮಾತ್ರವಲ್ಲ; ಸವಾರರ ಸೌಂದರ್ಯ ಪ್ರಜ್ಞೆಯ ಪ್ರತೀಕ ಕೂಡ. ಎಂತಲೇ ಕೆಲವರು ಪ್ರಾಣಹೋದರೂ ಅದನ್ನು ಮತ್ತೊಬ್ಬರ ಕೈಗೆ ಕೊಡರು.